**SC No. 221/2021**
**PW-2**

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ: 57)<br>ನಮೂನೆ ಸಂಖ್ಯೆ: 4 |

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಎಸ್.ಸಿ ನಂಃ **221/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ವಿನೋದ ಪಿಂಗಟ | ಪ್ರಾಸಾಃ 2 |
| ತಂದೆಯ ಹೆಸರು | : | ಓಮಾನಿ ಪಿಂಗಟ | ಚಾಸಾಃ 3 |
| ಪ್ರಾಯ | : | 37 ವರ್ಷ | ದಿನಾಂಕ 06.01.2026 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು. |
| ಉದ್ಯೋಗ | : | ಮ್ಯಾಕೆನಿಕಲ್ | |
| ವಾಸಸ್ಥಳ | : | ಗೌಂಡವಾಡ, ಬೆಳಗಾವಿ. | |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಚಾಸಾ-1 ಮತ್ತು ಚಾಸಾ-2 ಗೊತ್ತು. ಅವರು ನಮ್ಮ ಊರಿನವರು.

2. ದಿನಾಂಕ 07.06.2021 ರಂದು ಪೋಲಿಸರು ನನಗೆ ಒಂದು ನೋಟಿಸ್ಸನ್ನು ಕೊಟ್ಟಿದ್ದರು. ಆ ನೋಟಿಸ್ಸನ್ನು ನಿಪಿ-5 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಗುರುತಿಸಲಾಯಿತು. ಆ ನೋಟಿಸ್ಸನ್ನು ಸ್ವೀಕರಿಸಿ ಸ್ಥಳ ಪಂಚನಾಮೆ ಮಾಡಲು ನನ್ನ ಒಪ್ಪಿಗೆ ಇದೆ ಎಂದು ಒಂದು ಒಪ್ಪಿ ಗೆ ಪತ್ರವನ್ನು ಕೊಟ್ಟಿದ್ದೆನು. ಆ ಒಪ್ಪಿಗೆ ಪತ್ರವನ್ನು ನಿಪಿ-6 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-6(ಎ) ಗುರುತಿಸಲಾಯಿತು. ಆ ಬಳಿಕ ಪೋಲಿಸರು ನನ್ನನ್ನು ಆ ಗ್ರಾಮದ ಸರ್ವೆ ನಂಬರ 78 ರ

ಜಮೀನಿಗೆ ಕರೆಸಿದ್ದರು. ಆ ಕಾಲಕ್ಕೆ ಚಾಸಾ-1, ಚಾಸಾ-2 ಮತ್ತು ಇಬ್ಬರೂ ಪೋಲಿಸರು ಇದ್ದರು. ಚಾಸಾ-1 ರವರು ಅವರಿಗೆ ಹಲ್ಲೆ ಮಾಡಿದ ಜಾಗೆಯನ್ನು ಪೋಲಿಸರಿಗೆ ತೋರಿಸಿಕೊಟ್ಟರು. ಆಗ ಸ್ಥಳದಲ್ಲಿ ಒಂದು ಚಾಕು ಬಿದ್ದಿದ್ದು, ಅದನ್ನು ಚಾಸಾ-1 ರವರು ತೋರಿಸಿದ್ದು, ಪೋಲಿಸರು ಅದನ್ನು ಜಪ್ತಿ ಮಾಡಿದರು. ಪೋಲಿಸರು ಬೆಳಿಗ್ಗೆ 09.00 ಗಂಟೆಯಿಂದ 10.15 ಗಂಟೆಯವರೆಗೆ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿದರು. ಆ ಪಂಚನಾಮೆ ನಿಪಿ-2 ಆಗಿದ್ದು, ಸಾಕ್ಷಿಯು ಗುರುತಿಸಿದ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಆ ದಿನ ಅಮಾನತು ಪಡಿಸಿಕೊಂಡ ಚಾಕುವನ್ನು ನಾನು ಗುರುತಿಸುತ್ತೇನೆ. ಅದನ್ನು ಈಗಾಗಲೇ ಮುಮಾ-1 ಎಂದು ಗುರುತಿಸಲಾಗಿದೆ.

3. ಇದಾದ ಬಳಿಕ ಪೋಲಿಸರು ನನಗೆ ಇನ್ನೊಂದು ನೋಟಿಸ್ಸನ್ನು ಕೊಟ್ಟಿದ್ದರು. ಆ ನೋಟಿಸ್ಸನ್ನು ನಿಪಿ-7 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಗುರುತಿಸಲಾಯಿತು. ಆ ಪಂಚನಾಮೆಗೆ ಬರಲು ಒಪ್ಪಿ ನಾನು ಒಂದು ಒಪ್ಪಿಗೆ ಪತ್ರ ಪತ್ರವನ್ನು ಕೊಟ್ಟಿದ್ದೆನು. ಆ ಒಪ್ಪಿಗೆ ಪತ್ರವನ್ನು ನಿಪಿ-8 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-8(ಎ) ಗುರುತಿಸಲಾಯಿತು.

4. ಆ ಬಳಿಕ ಪೋಲಿಸರು ನನ್ನನ್ನು ಕಾಕತಿ ಪೋಲಿಸ ಠಾಣೆಗೆ ಕರೆಸಿದ್ದು, ನಾನು ಠಾಣೆಗೆ ಹೋದಾಗ ಬೆಳಿಗ್ಗೆ 11.30 ಗಂಟೆಯಾಗಿತ್ತು. ಆ ಕಾಲಕ್ಕೆ ಪೋಲಿಸ ಠಾಣೆಯಲ್ಲಿ ಚಾಸಾ-1 ಮತ್ತು ಚಾಸಾ-2 ರವರು ಇದ್ದರು. ಚಾಸಾ-1 ರವರು ಠಾಣೆಯಲ್ಲಿ ಚಾಸಾ-4 ರವರಿಗೆ ಸೇರಿದ ಒಂದು ಶರ್ಟನ್ನು ಹಾಜರು ಪಡಿಸಿದ್ದು, ಅದು ಕ್ರಿಮ್ ಕಲರಿನ ಶರ್ಟ್ ಆಗಿತ್ತು. ಆ ಶರ್ಟನ್ನು ನಾನು ಗುರುತಿಸುತ್ತಿದ್ದು, ಅದನ್ನು ಈಗಾಗಲೇ ಮುಮಾ-2 ಎಂದು ಗುರುತಿಸಲಾಗಿದೆ. ಪೋಲಿಸರು ಅದನ್ನು ಅಮಾನತು ಪಡಿಸಿಕೊಂಡು ಒಂದು ಪಂಚನಾಮೆಯನ್ನು ಬೆಳಿಗ್ಗೆ 11.30 ರಿಂದ 12.30 ಗಂಟೆಯ ಅವಧಿಯಲ್ಲಿ ಬರೆದಿದ್ದರು. ಆ ಪಂಚನಾಮೆಯನ್ನು ನಿಪಿ-9 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-

9(ಎ) ಎಂದು ಗುರುತಿಸಲಾಯಿತು. ಅಮಾನತು ಪಡಿಸಿಕೊಳ್ಳುವ ಕಾಲಕ್ಕೆ ಶರ್ಟ ರಕ್ತಸಿಕ್ತವಾಗಿತ್ತು. ಪೋಲಿಸರು ಜಮೀನಿನಲ್ಲಿ ನಡೆದ ಪಂಚನಾಮೆಯ ಕಾಲಕ್ಕೆ ನಿಪಿ-3 ರಂತೆ ಒಂದು ಪೋಟೊವನ್ನು ತೆಗೆದಿದ್ದರು. ಆ ಪೋಟೊದಲ್ಲಿ ನಾನು, ಚಾಸಾ-1, ಚಾಸಾ-2 ಮತ್ತು ಪೋಲಿಸರು ಇರುತ್ತೇವೆ.

<u>ಪಾಟೀ ಸವಾಲುಃ  ಆರೋಪಿತರ ಪರವಾಗಿಃ  ಶ್ರೀ ಎಸ್.ಕೆ.ಪಿ. ವಕೀಲರಿಂದಃ</u>

5. ನಾನು ಎಸ್ ಎಸ್ ಎಲ್ ಸಿ ವರೆಗೆ ಮರಾಠಿ ಮಾಧ್ಯಮದಲ್ಲಿ ಓದಿರುತ್ತೇನೆ. ಚಾಸಾ-2 ರವರು ಚಾಸಾ-1 ರವರ ಅಣ್ಣನ ಮಗ. 1 ನೇ ಆರೋಪಿಯು ನಮ್ಮ ವಿರುದ್ದ ದಾಖಲು ಮಾಡಿದ ಕ್ರಿಮಿನಲ್ ಕೇಸನಲ್ಲಿ ನಾನು ಆರನೇ ಆರೋಪಿಯಾಗಿರುತ್ತೇನೆ. ನಮ್ಮ ಊರಿನಲ್ಲಿ ಸುಮಾರು 3-4 ಸಾವಿರ ಜನಸಂಖ್ಯೆ ಇರುತ್ತದೆ. ಘಟನೆ ನಡೆದಿದೆ ಎಂದು ಹೇಳುವ ಸ್ಥಳದ ಅಕ್ಕಪಕ್ಕ ಸಾಕಷ್ಟು ಮನೆಗಳು ಇವೆ.

6. 1 ನೇ ಆರೋಪಿಯು ದಾಖಲು ಮಾಡಿದ ಕೇಸನಲ್ಲಿ ನಾನು ಆರೋಪಿಯಾಗಿರುವ ಕಾರಣ ನಾನೇ ಈ ಪ್ರಕರಣದಲ್ಲಿ ಪಂಚರಾಗಿ ಇರಲು ಮುಂದಕ್ಕೆ ಬಂದಿದ್ದೆ ಎನ್ನುವುದು ನಿಜವಲ್ಲ. ಆ ಕಾರಣದಿಂದಲೇ ಪೋಲಿಸರು ನನಗೆ ನೋಟಿಸ್ಸು ಕೊಟ್ಟು ನನ್ನನ್ನು ಪಂಚನಾಗಿ ಕರೆದಿದ್ದರು ಎನ್ನುವುದು ನಿಜವಲ್ಲ. ಚಾಸಾ-2 ರವರು ಚಾಸಾ-1 ರವರ ಹತ್ತಿರದ ಸಂಬಂಧಿಯಾದ ಕಾರಣ ಬೇರೆ ಜನರು ಇದ್ದರೂ ಕೂಡಾ ಪೋಲಿಸರು ಆತನನ್ನು ಪಂಚನಾಗಿ ಕರೆದಿದ್ದರು ಎನ್ನುವುದು ನಿಜವಲ್ಲ. ನಾನು ವಿವಾದಿತ ಸ್ಥಳದ ಉತಾರವನ್ನು ಪಂಚನಾಮೆ ಮಾಡುವ ಕಾಲಕ್ಕಾಗಲೀ ಅಥವಾ ಅದರ ನಂತರ ನೋಡಿರುವುದಿಲ್ಲ.

7. ಪೋಲಿಸರು ಆ ಜಮೀನಿನ ಸರ್ವೆ ನಂಬರ 78 ಎಂದು ಹೇಳಿದ ನಂತರ ನನಗೆ ಆ ವಿಚಾರ ತಿಳಿಯಿತು ಎಂದರೆ ಸಾಕ್ಷಿ ನನಗೆ ಮೊದಲೇ ಗೊತ್ತಿತ್ತು ಎನ್ನುತ್ತಾರೆ. ನಾನು ಸರ್ವೆ ನಂಬರ 78 ರ ಯಾವುದೇ ದಾಖಲಾತಿಗಳನ್ನು ನೋಡಿರುವುದಿಲ್ಲ. ಪೋಲಿಸರು ನನ್ನನ್ನು ಸ್ಥಳಕ್ಕೆ ಕರೆದು ಯಾವುದೇ ಪಂಚನಾಮೆಯನ್ನು ನನ್ನ ಸಮಕ್ಷಮ ಮಾಡಿಲ್ಲ ಮತ್ತು

ತಯಾರಿಸಿದ ಪಂಚನಾಮೆಗೆ ನನ್ನ ಸಹಿ ಪಡೆದುಕೊಂಡಿದ್ದಾರೆ ಎನ್ನುವುದು ನಿಜವಲ್ಲ. ಪೋಲಿಸರೊಂದಿಗೆ ಶಾಮೀಲಾಗಿ ಘಟನೆಯ ರಾತ್ರಿ ಅಲ್ಲಿ ಬೋರ್ಡ ಹಾಕಿ ನಾವು ಪೋಟೊ ತೆಗೆದಿದ್ದೇವೆ ಎನ್ನುವುದು ನಿಜವಲ್ಲ.

8. ಪಂಚನಾಮೆ ಕನ್ನಡದಲ್ಲಿ ಬರೆದಿರುವುದರಿಂದ ಅದರಲ್ಲಿ ಏನು ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಪೋಲಿಸರು ಅದನ್ನು ನನಗೆ ಓದಿ ಹೇಳಿದ್ದರು ಎನ್ನುತ್ತಾರೆ. ಘಟನಾ ಸ್ಥಳದ ಪಕ್ಕ ಒಂದು ಗಿರಣಿ ಇದೆ ಎನ್ನುವುದು ನಿಜ. ಪೋಲಿಸರು ಸ್ಥಳದಲ್ಲಿ ಬಿದ್ದಿದ್ದ ಚಾಕುವನ್ನು ನನ್ನ ಸಮಕ್ಷಮ ಅಮಾನತು ಪಡಿಸಿಕೊಂಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ನಾನು ಚಾಸಾ-1 ರವರು ಹೇಳಿಕೊಟ್ಟ ಪ್ರಕಾರ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ನಾನು ಪೋಲಿಸ ಠಾಣೆಯಲ್ಲಿ ಸಿದ್ದಪಡಿಸಿದಂತಹ ಪಂಚನಾಮೆಗೆ ಸಹಿ ಮಾಡಿದ್ದೆ ಮತ್ತು ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿ ಮುದ್ದೆಮಾಲುಗಳನ್ನು ಅಮಾನತು ಪಡಿಸಿಕೊಂಡಿಲ್ಲ ಎನ್ನುವುದು ನಿಜವಲ್ಲ. 1 ನೇ ಆರೋಪಿಯು ದಾಖಲಿಸಿದ ಕ್ರಿಮಿನಲ್ ಕೇಸನಲ್ಲಿ ನಮಗೆ ತೊಂದರೆಯಾಗುವುದನ್ನು ತಪ್ಪಿಸಿಕೊಳ್ಳಲು ನಾವು ಒಂದು ಸುಳ್ಳು ಪ್ರಕರಣವನ್ನು ದಾಖಲಿಸಿ, ಅದಕ್ಕೆ ಅನೂಕೂಲವಾಗುವಂತೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.